ಹಸಿರ ಒಲೆಯಲ್ಲಿ ನೊರೆ ಹಾಲಿನಂತೆ ಉಕ್ಕುತ್ತಿದ್ದ ಕಾಡ ನಡುವಿನ ಜಲಪಾತವನ್ನೂ, ಅಂಬೆಗಾಲಿಡುತ್ತಿರುವಂತೆ ಸುರಿವ ಪುಟ್ಟ ಪುಟ್ಟ ಹನಿಗಳ ಮಳೆಯನ್ನೂ, ಆ ಮಳೆಯ ನಡುವೆ ಕನಸಿನಂತೆ ಆವರಿಸಿ ಇಡೀ ಜಲಪಾತವನ್ನು ಮಾಯಮಾಡುತ್ತ ತನ್ನ ಬೆಳ್ಳಗಿನ ರಗ್ಗು ಹೊದೆಸಿದ ಆ ಮಂಜಿನ ಮಾಯಾಲೋಕವನ್ನು, ಆ ನಡುವಯಸ್ಸಿನ ದಂಪತಿ ಬೆರಗಿನಿಂದ ನೋಡುತ್ತಲೇ ಇದ್ದರು. ಅವರ ಮುಖದಲ್ಲಿ ಆ ಮಂಜಿನಂತಹದ್ದೇ ಮಾಯಕ ನಗು. ನಿಸರ್ಗ ದಯಪಾಲಿಸುವ ಈ ಅಮೂರ್ತ ಕ್ಷಣದಲ್ಲಿ ಏನೋ ಅಪೂರ್ವವಾದುದು ಸಿಕ್ಕಿದ ಧನ್ಯತೆಯಿತ್ತು ಅವರ ಕಣ್ಣಲ್ಲಿ.

“ಜಲಪಾತ ತುಂಬಾ ಚೆಂದ ಇದೆಯಲ್ಲವಾ? ಇಲ್ಲಿಗೆ ಮೊದಲ ಸಲ ಬರ್ತಿರೋದಾ?” – ಅವರ ಕೌತುಕವನ್ನು ಗಮನಿಸುತ್ತ ನಾನು ಸುಮ್ಮನೆ ಕೇಳಿದೆ. ಗಂಡ ಸಣ್ಣಗೆ ನಗುತ್ತಲೇ “ಮದುವೆಯಾದ ಹೊಸತರಲ್ಲಿ ಬಂದಿದ್ದೆವು. ಆ ಮೇಲೆ ಇವತ್ತೇ ಬರ್ತಾ ಇರೋದು. ಒಂದು ಜಾಗಕ್ಕೆ ನೂರು ಸಲ ಹೋಗಿದ್ದರೂ, ಮೊದಲ ಸಲ ನೋಡ್ತಿದ್ದೇವೆ, ಇಲ್ಲಿಗೆ ಮೊದಲ ಸಲ ಬಂದಿದ್ದೇವೆ ಅನ್ನೋ ಭಾವನೆಯಾಗುತ್ತೆ. ಈ ಭಾವನೆಯಲ್ಲೇ ಇಂತಹ ತಾಣಗಳನ್ನು ನೋಡಿದ್ರೆ ಬದುಕಿಗೆ ಅದೇ ಹೊಸತನ” ಎಂದು ಧುಮ್ಮಿಕ್ಕುವ ಆ ಜಲಪಾತದಂತೆಯೇ ನಕ್ಕರು.

“ಕೆಲವೊಂದು ಜಾಗಗಳಿಗೆ ನಾವು ಮತ್ತೆ ಮತ್ತೆ ಬಂದಿದ್ದರೂ, ಮೊದಲ ಸಲ ಬಂದಿದ್ದೇವೇನೋ ಎನ್ನುವ ಭಾವ ಮೂಡಿಸುವ ಶಕ್ತಿ ಇರುತ್ತೇನೋ, ಹೀಗಿದ್ದಾಗ ಮತ್ತೆ ಮತ್ತೆ ಒಂದೇ ಜಾಗಕ್ಕೆ ಬರೋಕೂ ಬೇಜಾರಾಗಲ್ಲ” ಎಂದು ಅವರ ಹೆಂಡತಿ ಕಣ್ಣರಳಿಸಿ ಹೇಳಿದರು.

ಮದುವೆಯಾಗಿ ಎಷ್ಟೋ ವರ್ಷಗಳಾದ ಮೇಲೆ ಈ ಜಾಗಕ್ಕೆ ಬಂದು, ಕಣ್ಣಲ್ಲಿ ಮತ್ತೆ ಹೊಸತನ ತುಂಬಿಕೊಂಡು ಸುತ್ತಲೂ ನೋಡುತ್ತಿರುವ ಅವರ ಕಣ್ಣಲ್ಲಿ, ಆವತ್ತು ಮೊದಲ ಸಲ ಇಲ್ಲಿಗೆ ಬಂದಾಗ ಸಿಕ್ಕಿದ ಅನುಭವಗಳ ನೆನಪಿನ ಸೋನೆಮಳೆ ಒಂದೇ ಸಮನೆ ಸುರಿಯುತ್ತಿದ್ದಂತೆ, ಆ ನೆನಪುಗಳೇ ಅವರ ಈ ದಿನದ ಪ್ರವಾಸವನ್ನು ಮತ್ತಷ್ಟು ಮಧುರವಾಗಿಸಿದಂತೆ, ಅವರ ಜೀವನೋತ್ಸಾಹವನ್ನು ಇನ್ನಷ್ಟು ಧಾರೆಯಾಗಿಸಿದಂತೆ ಕಂಡಿತು ನನಗೆ. ಅದಲ್ಲದೆ ಸಣ್ಣಗೇ ಸುರಿಯುತ್ತಿದ್ದ ಮಳೆಯೂ ಅವರ ನೆನಪುಗಳಿಗೆ ಕೊಡೆ ಹಿಡಿದಂತೆ ಅನ್ನಿಸಿತು.

ಈ ಮಳೆಗಾಲದ ಪ್ರವಾಸವಿದೆಯಲ್ಲ... ಅದು ಕೊಟ್ಟಷ್ಟು ಹಿತಾನುಭವವನ್ನು ಬೇರೆ ಯಾವ ಕಾಲವೂ ಕೊಡುವುದು ಕಷ್ಟವೇನೋ? ಚಳಿಗಾಲ ಒಂದಷ್ಟು ಬೆಚ್ಚನೆ ಅನುಭವಗಳನ್ನು ಕೊಡುತ್ತದಾದರೂ ಮಳೆಗಾಲಕ್ಕೆ ಯಾವುದೂ ಸಮವಲ್ಲ. ಸಣ್ಣಗೆ ಮಳೆ ಆಲಾಪ, ಮೋಡ ಕಪ್ಪು ಸುಂದರಿಯಾಗಿ ತುಂಬಿಕೊಂಡ ಚೆಂದ, ಮಲೆನಾಡ ಭಾಗಗಳಲ್ಲಿ ಕೂಗುವ ಜೀರುಂಡೆಗಳ ಸದ್ದು, ಬೀಳುವ ಮಳೆಗೆ ಒಮ್ಮೆಲೇ ತುಂಬಿಕೊಳ್ಳುವ ನದಿ, ಹಳ್ಳಗಳ ಅಲೌಕಿಕ ಸೌಂದರ್ಯ, ಮಳೆಗಾಲದಲ್ಲಷ್ಟೇ ಆವರಿಸಿಕೊಳ್ಳುವ ತಂಪು, ಮಾಯಾಲೋಕದಂತೆ ಬದಲಾಗಿಬಿಡುವ ಪರಿಸರ... ಇವೆಲ್ಲಾ ಬೇರೆ ಯಾವ ಕಾಲದಲ್ಲಿ ಸಿಕ್ಕೀತು?

ಮಳೆಗಾಲ ಬಂದರೆ ತುಂಬಿಕೊಳ್ಳುವುದು ಬರೀ ಹಳ್ಳ, ಕೊಳ್ಳ ಮಾತ್ರವಲ್ಲ, ನಮ್ಮ ಮೈಮನಸ್ಸಿನ ಜಲಪಾತದಲ್ಲೂ ಅಮೃತದಂತೆ ಉಕ್ಕುವ ಉಲ್ಲಾಸದ ಒರತೆ, ಸಾಲುಸಾಲು ಕವಿತೆಗಳಾಗಿ ರೂಪಾಂತರಗೊಳ್ಳುವ ಸಮಯವಿದು. ಇಂತಹ ಹೊತ್ತಲ್ಲಿ, ಮಳೆಯ ಜೊತೆಗೊಂದು ಸುತ್ತಾಟ ಹೊರಟರೆ ಆಹಾ... ಸುತ್ತಾಟದ ಆ ಅನುಭೂತಿಯನ್ನು ವರ್ಣಿಸಲು ಯಾವ ಕವಿತೆಗಳಿಗೂ ಸಾಧ್ಯವಿಲ್ಲವೇನೋ.

## ಮಳೆ ಪ್ರವಾಸ, ಬಾಳಿಗೆ ಉಲ್ಲಾಸ

ಪ್ರವಾಸವೆಂದರೆ ಆ ಕ್ಷಣಕ್ಕಷ್ಟೇ ಖುಷಿಯ ಅಮಲೇರಿಸಿಬಿಡುವ ಗುಂಗಲ್ಲ. ಮಳೆಗಾಲದಲ್ಲಿ ಮಾಡುವ ಒಂದೊಳ್ಳೆಯ ಪ್ರವಾಸ, ಚೆಂದದ ನಾಳೆಗಳಿಗೂ ಚೈತನ್ಯಶಕ್ತಿ ನೀಡುತ್ತದೆ. ಎಂದೋ ಬಾಲ್ಯದಲ್ಲೋ, ಯೌವನದಲ್ಲೋ ಮಾಡಿದ ಪ್ರವಾಸದ ಅನುಭವಗಳು, “ಸಣ್ಣವನಿದ್ದಾಗ ನಾ ಅಲ್ಲಿಗೆ ಪ್ರವಾಸ ಹೋಗಿದ್ದೆ”, “ಆ ದಿನ ಜೋರು ಮಳೆ ಬರ್ತಿತ್ತು, ನಾವೆಲ್ಲಾ ಚಂಡಿಯಾಗಿ ಅಲ್ಲಿಗೇ ಹೋಗಿದ್ವಿ, ಆ ಕ್ಷಣವನ್ನು ಮರೆಯೋಕ್ಕಾಗುತ್ತ” ಎಂಬಿತ್ಯಾದಿ ಮಾತುಗಳ ಮೂಲಕ ಬಾಳದಾರಿಯಲ್ಲಿ ನೆನಪುಗಳ ಮಳೆಯಲ್ಲಿ ನಮ್ಮನ್ನು ಆಗಾಗ ನೆನೆಸುತ್ತಲೇ ಇರುತ್ತದೆ. ಇದು ಮಳೆಗಿರುವ ಅದಮ್ಯ ಶಕ್ತಿ.

ನಾವು ಎಂದೋ ಸುರಿದ ಮಳೆಯಲ್ಲೊಮ್ಮೆ ಪ್ರವಾಸ ಮಾಡಿರುತ್ತೇವೆ. ಆ ಪ್ರವಾಸದಲ್ಲಿ ಸುಂದರ ಅನುಭವಗಳಿರುತ್ತವೆ. ಆ ಕ್ಷಣವನ್ನು ದಾಟಿ ಈಗ ತುಂಬಾ ಮುಂದೆ ಬಂದಿರುತ್ತೇವೆ. ಆದರೆ, ಮತ್ಯಾವಾಗಲೋ ಮಳೆ ಸುರಿಯುವಾಗ, ಸುಮ್ಮನೆ ಒಂದಷ್ಟು ಶಾಂತಚಿತ್ತರಾಗಿ ಕೂತು ಮಳೆ ನೋಡಿದರೆ, ಖಂಡಿತ ಆ ಮಳೆಯ ಬೀಸಿನಲ್ಲಿ ಅಂದು ನಾವು ಮಾಡಿದ ಪ್ರವಾಸದ ನೆನಪುಗಳೆಲ್ಲ ಮನದ ಬಾನಿನಲ್ಲಿ ಫಳಫಳ ಹೊಳೆಯುವ ನಕ್ಷತ್ರಗಳಾಗುತ್ತವೆ. ‘ಮತ್ತೆ ಮಳೆ ಹೊಯ್ಯುತಿದೆ, ಎಲ್ಲಾ ನೆನಪಾಗುತ್ತಿದೆ’ ಎನ್ನುವ ಯು.ಆರ್ ಅನಂತಮೂರ್ತಿಯವರ ಕವಿತೆಯ ಸಾಲಿನಂತೆ, ಒಂದು ಕಾಲದ ಮಳೆಯಲ್ಲಿ ಮಾಡಿದ ಹಳೆಯ ಪ್ರವಾಸವೂ ನೆನಪಾಗಿ, ಆಹಾ ಎಷ್ಟು ಚೆಂದವಿತ್ತು ಆ ಮಳೆಯ ಅನುಭವ ಎಂದು ನಮ್ಮೊಳಗೆ ಹರುಷದ ಮಳೆ ಸುರಿದಂತಾಗುತ್ತದೆ. ಮರೆತ ಕ್ಷಣಗಳನ್ನು ಮತ್ತೆ ನೆನಪಿಸಿ ನಮ್ಮ ಪ್ರವಾಸದ ಹವ್ಯಾಸವನ್ನು ಮತ್ತೆ ಮುಂದುವರೆಸುವಂತೆ ಆ ಹಳೆಯ ಪ್ರವಾಸದ ಅನುಭವ ಇಂದಿಗೂ ಸ್ಫೂರ್ತಿಯಾಗುತ್ತದೆ. ಆಗ ಮತ್ತೊಂದು ಮಳೆ ಪ್ರವಾಸ ಮಾಡಬೇಕು ಎನ್ನುವ ಮನಸ್ಸಾಗಬಹುದು. ಮಳೆ ಹನಿಗಳಿಗೆ ಬೊಗಸೆಯೊಡ್ಡಿ ಹಸಿರ ತಪ್ಪಲುಗಳಲ್ಲಿ, ನಿಗೂಢ ದಾರಿಗಳಲ್ಲಿ ಕಳೆದುಹೋಗಬೇಕು ಎನ್ನುವ ಆಸೆಯ ಮಳೆಯೂ ನಮ್ಮೊಳಗೆ ರಚ್ಚೆ ಹಿಡಿಯಬಹುದು.

ಈ ಮಳೆಗಾಲದ ಪ್ರವಾಸ ಕೊಡುವ ಒಂದೊಂದು ಅನುಭವವೂ ನವನವೀನ. ನಮ್ಮೊಳಗನ್ನು ಬೆಳೆಸುವ, ನಮ್ಮನ್ನು



